# ಡಂಗುರವ ಸಾರಿರಯ್ಯ ಹರಿಯ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao. Given without highlights.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru. Mentioned in yellow highlights.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. Mentioned in blue highlights.
4. **Note:** Singer has followed the lyrics as in Ref. 1.
5. **Note:** Lyrics in all the three references are similar with slight differences. Hence, they are given separately.
6. **Note:** The Ankita is different in the above reference books. We have considered book in Ref. 3 as standard and taken that Ankita for listing.

ರಾಗ: ಪೂರ್ವಿ ತಾಳ: ಆದಿ

(ರಾಗ: ಪಂತುವರಾಳಿ ತಾಳ: ಆದಿ)

(ರಾಗ: ನಾದನಾಮಕ್ರಿಯೆ ತಾಳ: ಆದಿ)

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು
ಭೂ ಮಂಡಲಕ್ಕೆ ಪಾಂಡುರಂಗ ವಿಠಲ ಪರದೈವವೆಂದು ॥ ಪ ॥
(ಡಂಗುರವ ಸಾರಿ ಹರಿಯ ಡಿಂಗರಿಗರೆಲ್ಲರು ಭೂ-
ರಂಗದೊಳಗೆಲ್ಲ ಪಾಂಡುರಂಗ ಪರ-ದೈವವೆಂದು)
(ಡಂಗುರವ ಸಾರಿ ಹರಿಯ ಡಿಂಗರಿಗರೆಲ್ಲರು ಭೂ-
ಮಂಡಲಕ್ಕೆ ಪಾಂಡುರಂಗ ವಿಠ್ಠಲನೆ ಪರ-ದೈವವೆಂದು)

ಹರಿಯು ಮುಡಿದ ಹೂವು ಹರಿವಾಣದೊಳಗಿಟ್ಟುಕೊಂಡು
ಹರುಷದಿಂದ ಹಾಡಿ ಪಾಡಿ ಕುಣಿದು ಚಪ್ಪಾಳಿಕ್ಕುತ ॥ ೧ ॥
(ಹರಿಯು ಮುಡಿದ ಹೂವ ಹರಿವಾಣದೊಳಗಿಟ್ಟುಕೊಂಡು
ಹರುಷದಿಂದ ಹಾಡಿ ಪಾಡಿ ಕುಣಿದು ಚಪ್ಪಳಿಕ್ಕುತ)
(ಒಡಲ ಜಾಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು

ಬಿಡದೆ ಢಣ ಢಣರೆಂದು ಬಡಿದು ಚಪ್ಪಳಿಕ್ಕುತ)

ಒಡಲ ಜಾಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು
ಢಂಢಂ ಢಣಾ ಢಣಾರೆಂದು ಹೊಡೆದು ಚಪ್ಪಾಳಿಕ್ಕುತ || ೨ ||
(ಒಡಲ ಜಾಗಟೆಯ ಮಾಡಿ ಮಿಡಿವ ಗುಣಿ ನಾಲಗೆಯ ಮಾಡಿ
ಒಡನೆ ಢಣ ಢಣ ಢಣ ಢಣ ಎಂದು ಕುಣಿದು ಚಪ್ಪಳಿಕ್ಕುತ)
(ಹರಿಯು ಮುಡಿದ ಹೂವ ಹರಿವಾಣದಲ್ಲಿ ಹೊತ್ತುಕೊಂಡು
ಹರುಷದಿಂದ ಹಾಡಿ ಪಾಡಿ ಕುಣಿದು ಚಪ್ಪಳಿಕ್ಕುತ)

ಇಂತು ಜಗಕೆಲ್ಲ ಲಕ್ಷ್ಮೀಕಾಂತನಲ್ಲದಿಲ್ಲವೆಂದು
ಸಂತತ ಶ್ರೀ ಪುರಂದರ ವಿಠಲ ಪರದೈವವೆಂದು || ೩ ||
(ಇಂತು ಸಕಲ ಜಗಕೆ ಲಕ್ಷ್ಮೀಕಾಂತನೆ ಪರ-ದೈವವೆಂದು
ಕಂತುಪಿತ ಪುರಂದರ ವಿಠ್ಠಲ ಪರ-ದೈವವೆಂದು)
(ಇಂತು ಸಕಲ ಜಗಕೆ ಲಕ್ಷ್ಮೀಕಾಂತನಲ್ಲದಿಲ್ಲವೆಂದು
ಸಂತತಂ ಭಜಿಸುತ ನಿಶ್ಚಿಂತ ಪುರಂದರ ವಿಠಲನೆಂದು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಡಿಂಗರಿಗರು** – ಸೇವಕರು, ಭಕ್ತರು.

**ಹರಿಯು ಮುಡಿದ ಹೂವು** – ಪ್ರಸಾದ ರೂಪವಾದುದು.

**ಹರಿವಾಣ** – ಚಿನ್ನದ ತಟ್ಟೆ.

**ಒಡಲ…** – ತನ್ನ ಹೃದಯವನ್ನೇ ಜಾಗಟೆಯನ್ನಾಗಿ ಮಾಡಿ, ಹರಿನಾಮವನ್ನು ನುಡಿಯುವ ನಾಲಗೆಯನ್ನು ಕೋಲನ್ನಾಗಿ ಮಾಡಿಕೊಂಡು ಬಡಿದರೆ, ಭಕ್ತಿಯು ಹೃದಯದಲ್ಲಿ ಮೂಡುತ್ತದೆ ಎಂದು ಭಾವ.

**ಸಂತತ** – ಎಂದೆಂದಿಗೂ.

**Classification:** Keerthane

**Ankita:** purandara vittala
**Location:** NA
**Category:** harisarvottama
**Sub-Category:** Krishna, panduranga, huvu, santosha, nalige, Lakshmi, loka, daiva, bhajane,
**Pravachana:** NA
**Explanation:** NA